ಸಾಕ್ಷಿ ಯನ್ನು ದಿಃ 02.04.2026 ರಂದು ಪುನಃ ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.

**ಪಾಟೀ ಸವಾಲುಃ ಪಿರ್ಯಾದುದಾರರ ಪರ ವಕೀಲರಿಂದ**

1. ಆರೋಪಿ ನಿಮ್ಮ ಸಂಬಂಧಿಕರು ಎಂದರೆ, ಇಲ್ಲ ಗ್ರಾಮಸ್ಥರು ಎಂದು ನುಡಿಯುತ್ತಾರೆ. ನಾನು ಹಾಗೂ ಆರೋಪಿ ಒಂದೇ ಸಮುದಾಯದವರು ಎಂದರೆ ಸರಿ.
2. ದೂರುದಾರರು ಹಾಗೂ ಆರೋಪಿ ನಡುವೆ ಆದ ಎಲ್ಲಾ ವ್ಯವಹಾರಗಳ ಬಗ್ಗೆ ನಿಮಗೆ ಖುದ್ದು ಮಾಹಿತಿ ಇದೆಯಾ ಎಂದರೆ, ಇಲ್ಲ.
3. ನನ್ನ ಮುಖ್ಯ ವಿಚಾರಣೆ ಪ್ರಮಾಣ ಪತ್ರವನ್ನು ವೆಂಕಟೇಶರವರು ಹೇಳಿ ಬರೆಸಿದ್ದಾರಾ ಎಂದರೆ, ನನಗೆ ಗೊತ್ತಿಲ್ಲ. ಅದರಲ್ಲಿ ಬರೆದ ವಿಚಾರಗಳ ಬಗ್ಗೆ ನನಗೆ ಗೊತ್ತಿಲ್ಲ.
4. ದೂರುದಾರರಿಂದ ಆರೋಪಿಯು 2 ಲಕ್ಷ ಸಾಲವಾಗಿಯು ದೂರುದಾರರಿಗೆ ನಿಪಿ - 1 ರ ಚೆಕ್ಕನ್ನು ನೀಡಿದ್ದಾರೆ ಎಂದರೆ ನನಗೆ ಗೊತ್ತಿಲ್ಲ.
5. ಆರೋಪಿಗೆ ಸಹಾಯವಾಗಲಿ ಎಂದು ಅವರ ಮಾತು ಕೇಳಿ ಸುಳ್ಳು ಪ್ರಮಾಣ ಪತ್ರ ಸಲ್ಲಿಸಿದ್ದೀರಾ ಎಂದರೆ ಸರಿಯಲ್ಲ.
6. ಊರಿನಲ್ಲಿ ನ್ಯಾಯ ಪಂಚಾಯತಿ ಯಾವ ತಾರೀಖು ಮಾಡಿದ್ದರು ಎಂದರೆ ನನಗೆ ಗೊತ್ತಿಲ್ಲ.
7. ದೂರುದಾರರು ಹಾಗೂ ಆರೋಪಿ ನಡುವೆ ಜಮೀನು ಸಂಬಂಧಪಟ್ಟಂತೆ ಕರಾರು ಪತ್ರ ಆಗಿತ್ತಾ ಎಂದರೆ ನನಗೆ ಗೊತ್ತಿಲ್ಲ. ಜಮೀನು ಸಂಬಂಧಪಟ್ಟಂತೆ 3-4 ವರ್ಷದ ಹಿಂದೆ ವ್ಯವಹಾರ ಆಗಿತ್ತು. ವೆಂಕಟೇಶ, ಗುರುಲಿಂಗಪ್ಪ ರವರ ನಡುವೆ ಆಗಿತ್ತು. ಆ ದಿನ ಲಿಖಿತವಾಗಿ ಬರವಣಿಗೆ ಆಗಿತ್ತಾ ಎಂದರೆ ನನಗೆ ಗೊತ್ತಿಲ್ಲ.
8. ಅವರ ನಡುವೆ ಪ್ರೊನೋಟ್ ಆಗಿರುವ ವಿಚಾರ ನನಗೆ ಗೊತ್ತಿಲ್ಲ.
9. ವೆಂಕಟೇಶ ರವರು ಯಾವ ಭಾಷೆಯಲ್ಲಿ ಸಹಿ ಮಾಡುತ್ತಾರೆ ಎಂದು ನನಗೆ ಗೊತ್ತಿಲ್ಲ.
10. ವೆಂಕಟೇಶ ರವರು ಯಾವ ಬ್ಯಾಂಕಿನ ಚೆಕ್ ಪಡೆದಿದ್ದರು ಎಂದು ನನಗೆ ಗೊತ್ತಿಲ್ಲ.
11. ಆರೋಪಿ ನಿಮ್ಮ ಸಂಬಂಧಿಕರಾದ ಕಾರಣ ಅವರಿಗೆ ಸಹಾಯವಾಗಲಿ ಎಂದು ಸುಳ್ಳು ಪ್ರಮಾಣ ಪತ್ರ ಸಲ್ಲಿಸಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೀರಿ ಎಂದರೆ ಸರಿಯಲ್ಲ.

**ಮರು ವಿಚಾರಣೆಃ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯು ಹೇಳಿದಂತೆ ನನ್ನ ಉಕ್ತಲೇಖದಂತೆ ಬೆರಳಚ್ಚು ಮಾಡಲಾಯಿತು.) ಓ ಹೇ ಕೇ ಸ ಇ ಒ

ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ., ಪಿರಿಯಾಪಟ್ಟಣ